III) ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ ಆರ್ಥಿಕ ನೆರವಿನೊಡನೆ ಕದಕೊಳದಲ್ಲಿ ಒಂದು 220 ಕೆ. ವಿ. ವಿದ್ಯುತ್ ಸ್ವೀಕರಣಾಕೇಂದ್ರವನ್ನು ನಿರ್ಮಾಣ ಮಾಡಲಾಗುವುದು.

1) ವಾಜಮಂಗಲದಲ್ಲಿ ಒಂದು 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ. ಪವರ್ ಫೈನಾನ್ಸ್ ಕಾರ್ಪೊರೇಷನ್ ನಿಂದ ಆರ್ಥಿಕ ನೆರವನ್ನು ಪಡೆಯಲು ಈ ಯೋಜನೆಯನ್ನು ಸದರಿ ಸಂಸ್ಥೆಗೆ ಸಲ್ಲಿಸಲಾಗಿದೆ.

ಅರ್ಬನ್ ಡಿಸ್ಟ್ರಿಬ್ಯೂಷನ್ ಇಂಪ್ರೂಮೆಂಟ್ ಸ್ಕೀಮ್, ಮೈಸೂರು ಫೇಸ್-1 ರಡಿಯಲ್ಲಿ ಎಫ್‌ಟಿಎಸ್, ಹೂಟಗಳ್ಳಿ, ಮೈಸೂರು ದಕ್ಷಿಣ ಮತ್ತು ಮೇಟಗಳ್ಳಿ ವಿದ್ಯುತ್ ಉಪಕೇಂದ್ರಗಳ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯಗಳನ್ನು ಹೆಚ್ಚಳಗೊಳಿಸಲಾಗಿದೆ. ಆರ್. ಕೆ. ನಗರ ವಿದ್ಯುತ್ ಉಪ ಕೇಂದ್ರದ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.

ಆ) ಭೂವಿವಾದದಿಂದಾಗಿ ದೊಡ್ಡಕೆರೆ ಮೈದಾನದಲ್ಲಿ 66 ಕೆ. ವಿ. ವಿದ್ಯುತ್ ಉಪಕೇಂದ್ರದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. ಈಗ ಭೂವಿವಿವಾದವು ಬಗೆಹರಿದಿದ್ದು, ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗುತ್ತಿದೆ. ನಿರ್ಮಾಣ ಕಾರ್ಯವನ್ನು ಮೇ 97 ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಿದೆ. ಆದರೆ ಇದು ಮಂಡಳಿಗೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲವನ್ನು ಅವಲಂಬಿಸಿದೆ.

ಇ) ಅರ್ಬನ್ ಡಿಸ್ಟ್ರಿಬ್ಯೂಷನ್ ಇಂಪ್ರೂವ್‌ಮೆಂಟ್ ಸ್ಕೀಮ್ ಮೈಸೂರು ಫೇಸ್-11 ಯೋಜನೆಗೆ ಕೇವಲ ನವೆಂಬರ್ 95 ರಲ್ಲಿ ಮಂಜೂರಾತಿ ದೊರಕಿದೆ. ಹೀಗಾಗಿ, ಈ ಯೋಜನೆಯಡಿ ಒಳಗೊಂಡಿರುವ ಕಾರ್ಯಗಳು ಇನ್ನೂ ಪ್ರಾರಂಭಿಕ ಹಂತದಲ್ಲಿದೆ.

ಈ) ಕಡಕೊಳ್ಳ 220 ಕೆ. ವಿ. ವಿದ್ಯುತ್ ಸ್ವೀಕರಣಾ ಕೇಂದ್ರದ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ. ಮತ್ತು ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ವಿದ್ಯುತ್ ಸ್ವೀಕರಣಾ ಕೇಂದ್ರದ ನಿರ್ಮಾಣ ಕಾರ್ಯವನ್ನು ಡಿಸೆಂಬರ್ 97 ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತನಗೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲವನ್ನು ಅವಲಂಬಿಸಿ, ಈ ಗುರಿಯನ್ನು ಸಾಧಿಸಬೇಕಾಗುತ್ತದೆ.

ವಿಷಯ :- ಅನುಕಂಪದ ಆಧಾರದ ಮೇಲೆ ನೇಮಕಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 958 (1565)

ಶ್ರೀ ಶೈಲಪ್ಪ ಬಿದನೂರು (ರೋಣ) :- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಬಾಕಿ ಇರುವ ಪ್ರಕರಣ ಗಳೆಷ್ಟು ; (ಇಲಾಖಾವಾರು ವಿವರ ನೀಡುವುದು) ;

ಆ) ನೇಮಕಾತಿ ಮಾಡುವಲ್ಲಿ ವಿಳಂಬಕ್ಕೆ ಕಾರಣವೇನು ;

ಇ) ಬಾಕಿ ಇರುವ ಪ್ರಕರಣಗಳನ್ನು ವಿಲೇವಾರಿ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು ;

ಈ) ಅನುಕಂಪದ ಆಧಾರದ ನೇಮಕಾತಿಗಾಗಿ ಇರತಕ್ಕ ನಿಯಮಗಳು ಯಾವುವು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :-

ಆ) ನೇಮಕಾತಿ ಮಾಡುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರಿಗಳಿಗೆ ವಹಿಸಿ ಕೊಟ್ಟಿರುವುದರಿಂದ, ಮಾಹಿತಿಕೇಂದ್ರೀಕೃತವಾಗಿ ಲಭ್ಯವಿಲ್ಲ.

ಆ) ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಅನುಕಂಪ ನೇಮಕಾತಿಗಾಗಿ ನಿಯಮಗಳನ್ನು ರಚಿಸಲು, ಕರಡು ನಿಯಮಗಳನ್ನು ದಿನಾಂಕ : 23-3-96 ರಂದು ಹೊರಡಿಸಿ ಆಕ್ಷೇಪಣೆಗಳು : ಸಲಹೆಗಳನ್ನು ಆಹ್ವಾನಿಸಿತ್ತು. ಆ ರೀತಿ ಬಂದ ಆಕ್ಷೇಪಣೆಗಳು : ಸಲಹೆ ಗಳನ್ನು ಪರಿಶೀಲಿಸಲಾಗುತ್ತಿದ್ದು, ಸಧ್ಯದಲ್ಲಿಯೇ ಅಂತಿಮ ನಿಯಮಗಳನ್ನು ಹೊರಡಿಸ ಲಾಗುವುದು.

ಇ) ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಪರಿಗಣಿಸಲು ಕರಡು ನಿಯಮ ಗಳಲ್ಲಿ ಅಸ್ಪದವನ್ನು ಕಲ್ಪಿಸಲಾಗಿದೆ.

ಈ) ಸದ್ಯಕ್ಕೆ ಯಾವ ನಿಯಮಗಳು ಇಲ್ಲ. ಕರಡು ನಿಯಮಗಳನ್ನು ಈಗಾಗಲೇ ಪ್ರಕಟಪಡಿಸಿದೆ. ಬಂದಿರುವ ಸಲಹೆ : ಆಕ್ಷೇಪಣೆಗಳನ್ನು ಪರಿಗಣಿಸಲಾಗುತ್ತಿದೆ. ಶೀಘ್ರ ದಲ್ಲಿಯೇ ಅಂತಿಮ ನಿಯಮಗಳನ್ನು ಹೊರಡಿಸಲಾಗುವುದು.

ವಿಷಯ :- ಹಸಿರು ಕಾರ್ಡುಗಳ ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 959 (1721)

ಶ್ರೀ ಜೆ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ರಾಜ್ಯದಾದ್ಯಂತ ಹಸಿರು ಕಾರ್ಡು ಸಂಪೂರ್ಣವಾಗಿ ವಿತರಿಸಲಾಗಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ;

ಇ) ಇಡೀ ರಾಜ್ಯದಲ್ಲಿ ಹಸಿರು ಕಾರ್ಡು ಸಮರ್ಪಕವಾಗಿ ವಿತರಿಸಲು ಸರ್ಕಾರದವರು ಹಮ್ಮಿಗೊಂಡಿರುವ ಕಾರ್ಯಕ್ರಮಗಳೇನು?